## ಪ್ರಚಲಿತ ಘಟನೆಗಳು

ಪ್ರಚಲಿತ ಘಟನೆಗಳು ಸಮಕಾಲೀನ ಸತ್ಯಾಂಶಗಳು. ಇವು ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಅರಳಿಸುತ್ತವೆ. ಎಲ್ಲಾ ರೀತಿಯ ವಿಚಾರಧಾರೆಗೂ ಅವಕಾಶವಿದೆ. ಅಂದರೆ ಸಂಸಾರಿಕ ವಿಷಯದಿಂದ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ವಿಷಯಗಳನ್ನು ಒಳಗೊಂಡಂತೆ ಆ ಶೈಕ್ಷಣಿಕ ಸಮಾಜದ ಪ್ರಗತಿ ಅಥವಾ ಅವನತಿ, ಆರ್ಥಿಕ, ಸಾಮಾಜಿಕ,, ಧಾರ್ಮಿಕ, ರಾಜಕೀಯ, ಸಂವಿಧಾನಾತ್ಮಕ ವಿಷಯಗಳೊಂದಿಗೆ ದೇಶಸೇವೆ, ದೇಶಭಕ್ತಿಯಂತಹ ಮಹತ್ವದ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ.ಇವು ವಿದ್ಯಾರ್ಥಿಗಳಲ್ಲಿ ಸಮಕಾಲೀನ ಸಮಸ್ಯೆಗಳ ಅರಿವನ್ನುಂಟು ಮಾಡಿ ಭವಿಷ್ಯತ್ತಿನ ಬಗ್ಗೆ ಆಲೋಚನೆ ಬೆಳೆಸುವ ಪ್ರಮುಖ ಅಸ್ತ್ರಗಳಾಗಿವೆ.

## ಅರ್ಥ

ಸಾಮಾನ್ಯವಾಗಿ ಇಂದು ಸಮಾಜದಲ್ಲಿ ಜರುಗುವ ಪ್ರತಿಯೊಂದು ಘಟನೆಗಳು ಪ್ರಚಲಿತ ವಿಷಯಗಳೇ ಎಂದು ಹೇಳಬಹುದು.

ಡಾ.ಜೋನ್ಸನ್‌ರವರ ಪ್ರಕಾರ; ಇತ್ತೀಚೆಗೆ ನಡೆದ ಘಟನೆಗಳೇ ಪ್ರಚಲಿತ ಘಟನೆಗಳು.

Recent accurence of an event is called curent event.

ಆರ್ ಎಸ್ ಕಿಂಬಾಲ್ ; ಪ್ರಚಲಿತ ಘಟನೆಗಳು ನಿಷ್ಠೆಯ ಮತ್ತು ಸೇವಾ ಮನೋಭಾವದ ಪೌರತ್ವ ಮತ್ತು ಆಧಾರವಾಗಿ ಬೇಕಾಗಿರುವ ಆಂತರಿಕ ಮತ್ತು ಅಂತರ್‌ರಾಷ್ಟ್ರೀಯ,ಸಾಮಾಜಿಕ, ರಾಜಕೀಯ ಅಥವಾ ಆರ್ಥಿಕ ಜ್ಞಾನ & ಗ್ರಹಿಕೆಯ ಎಲ್ಲಾ ಘಟನೆಗಳೊಂದಿಗೆ ಸಂಬಂಧಿಸಿವೆ.

Current events are concerned with all the happenings both domestic & international, social, political, or economic knowledge & understanding of which is necessary as a basis for citizenship of loyalty & service.

## ಪ್ರಚಲಿತ ಘಟನೆಗಳ ಬೋಧನೆಯ ನಿರ್ದಿಷ್ಟ ಗುರಿಗಳು &ಉದ್ದೇಶಗಳು

- ರೇಡಿಯೋ, ವರ್ತಮಾನ ಪತ್ರಿಕೆಗಳು, ಮ್ಯಾಗಜೀನ್‌ಗಳು ಮುಂತಾದವುಗಳಿಂದ ಪಡೆದುಕೊಂಡ ಮಾಹಿತಿಯು ವಿಮರ್ಶಾತ್ಮಕ ನಿಶ್ಚಯವನ್ನು ವೃದ್ಧಿಗೊಳಿಸುವುದು.
- ಅಸಮಂಜಸತೆಗಳು, ವೈರುಧ್ಯಗಳು & ತೊಡಕುಗಳನ್ನು ಬಿಡಿಸಿಕೊಳ್ಳುವುದರಲ್ಲಿ ಕೌಶಲ್ಯವನ್ನು ಬೆಳೆಸುವುದು.
- ಸಮಾಜ, ರಾಜ್ಯ, ರಾಷ್ಟ್ರ & ವಿಶ್ವ ವಿದ್ಯಮಾನಗಳಲ್ಲಿ ಆಸಕ್ತಿ ಸೃಷ್ಟಿಸುವುದು & ವೃದ್ಧಿಗೊಳಿಸುವುದು.
- ವಿದ್ಯಾರ್ಥಿಗಳು ಪ್ರಚಲಿತ ವಸ್ತುಗಳನ್ನು ಬುದ್ಧಿ ಗ್ರಾಹ್ಯವಾಗಿ ಓದುವಂತೆ ಮಾಡುವುದು & ಇನ್ನೂಹೆಚ್ಚಿನ ಜ್ಞಾನಕ್ಕಾಗಿ ಶೋಧಿಸುವಂತೆ ಬೋಧಿಸುವುದು.

---

- ಪ್ರಚಲಿತ ಸಾಮಾಜಿಕ, ಆರ್ಥಿಕ, ರಾಜಕೀಯ ಸಮಸ್ಯೆಗಳ ಅರ್ಥೈಸುವಿಕೆಗೆ ಆಧಾರವನ್ನೊದಗಿಸುವುದು.
- ನಾಯಕತ್ವದ ಗುಣಗಳನ್ನು ಬೆಳೆಸುವ ಮೂಲಕ, ಜವಾಬ್ದಾರಿಯುತವಾದ ಕಾರ್ಯ ನಿರ್ವಹಿಸುವ ಮನೋಭಾವನೆ ಬೆಳೆಸುವುದು.
- ಕಾಲದ ಬಗ್ಗೆ ಅರಿವು ಮೂಡಿಸುವುದು.
- ವಿರಾಮ ವೇಳೆಯ ಸದುಪಯೋಗ & ಜೀವನದಲ್ಲಿಉತ್ತಮ ಮೌಲ್ಯಗಳ ಬೆಳವಣಿಗೆ ಮಾಡಿಕೊಳ್ಳುವಂತೆ ತಿಳಿಸುವುದು.
- ಚರ್ಚೆಯ ಮೂಲಕ ಭಾವನೆಗಳ ವಿನಿಮಯಕ್ಕೆ ಅವಕಾಶಗಳನ್ನು ಒದಗಿಸುವುದು.

- ಗ್ರಹಿಕೆ & ತಾಳ್ಮೆಯನ್ನು ವೃದ್ಧಿಸುವುದು.
- ಅಂತರಾಷ್ಟ್ರೀಯ ಅರಿವನ್ನು ಬೆಳೆಸುವುದು.
- ಸಮಕಾಲೀನ ಸಮಸ್ಯೆಗಳು & ಘಟನೆಗಳ ಹಿನ್ನೆಲೆಯನ್ನು ಒದಗಿಸುವುದು.
- ಉತ್ತಮ ತೀರ್ಪು, ಸಹಕಾರ ಭಾವನೆ ಮತ್ತು ಕೆಲವು ಕುಶಲ ಕಲೆಗಳನ್ನು ಬೆಳೆಸುವುದು.
- ವಿದ್ಯಾರ್ಥಿಗಳು ತಮ್ಮ ಸ್ಥಳೀಯ ಸಮಸ್ಯೆಗಳನ್ನು ಕುರಿತು ಚರ್ಚಿಸುವಂತೆ ಮಾಡುವುದು.

## ಪ್ರಚಲಿತ ಘಟನೆಗಳ ಆಯ್ಕೆಗೆ ಮಾನದಂಡ/ಗಮನಿಸಬೇಕಾದ ಅಂಶಗಳು.

೧)**ಸೂಕ್ತತೆ**; ಪ್ರಚಲಿತ ಘಟನೆಗಳು ವಿದ್ಯಾರ್ಥಿಗಳ ವಯಸ್ಸು, ಬುದ್ಧಿಶಕ್ತಿ, & ತರಗತಿಗಳಿಗೆ ಹೊಂದಾಣಿಕೆಯಾಗಬೇಕು.

೨)**ನಂಬಿಕಾರ್ಹವಾಗಿರಬೇಕು**; ಅವು ಸತ್ಯಸಂಗತಿಗಳಾಗಿರಬೇಕು, ಆಧಾರವುಳ್ಳವು, ನಿಖರ & ವಿಶ್ವಾಸಾರ್ಹವಾದವುಗಳಾಗಿರಬೇಕು.

೩)**ಹೊಸ ಹೊಸ ವಿಷಯಗಳಾಗಿರಬೇಕು**; ನೂತನ ಸಂಶೋಧನೆ, ನಿರ್ಮಾಣ & ಹೊಸದಾಗಿ ಕಂಡುಹಿಡಿದ ವಿಷಯಗಳಾಗಿರಬೇಕು.

೪) **ಉಪಯುಕ್ತತೆ**; ಶೈಕ್ಷಣಿಕ ಮೌಲ್ಯವುಳ್ಳವು & ವಿದ್ಯಾರ್ಥಿಗಳಿಗೆ ತಿಳುವಳಿಕೆ ಮೂಡಿಸಬೇಕು.

೫) ಸುಪ್ರಸಿದ್ಧ ಸುದ್ಧಿ ಮೂಲಗಳಾಗಿರಬೇಕು.

೬) ಸಮಯಕ್ಕೆ ತಕ್ಕಂತೆ & ನಿರಂತರವಾಗಿರಬೇಕು.

೭) ಆಧುನಿಕ ಜೀವನದಲ್ಲಿ ಸಾಮಾಜಿಕ ಹೊಂದಾಣಿಕೆಯಲ್ಲಿ ವಿಭಿನ್ನ ಪ್ರಕ್ರಿಯೆಯನ್ನು ತೋರಿಸುವಂತಹ ಘಟನೆಗಳಾಗಿರಬೇಕು

## ಪ್ರಚಲಿತ ವಿಷಯ ಸಾಮಗ್ರಿಗಳು

- **ನೂತನ ಮುದ್ರಿತ ಸುದ್ಧಿ ಸಾಮಗ್ರಿಗಳು**; ದಿನಪತ್ರಿಕೆಗಳು, ವಾರ,ಮಾಸ ಪತ್ರಿಕೆಗಳು, ವಾರ್ಷಿಕ ಪುಸ್ತಕಗಳು,ಇತ್ಯಾದಿಗಳು
- **ಜಾಹಿರಾತುಗಳು**; ಗೋಡೆ ಮೇಲೆಅಂಟಿಸುವ ಚಿತ್ರಗಳು, ಸಾಮಾನ್ಯ ಚಿತ್ರಗಳು, ನೋಟೀಸುಗಳು, ವೇಳಾಪಟ್ಟಿ, ಪ್ರವಾಸ ಮಾರ್ಗಸೂಚಿಗಳು, ಬೆಲೆಪಟ್ಟಿ, ಪುಸ್ತಕ ಪಟ್ಟಿಗಳು, ಇತ್ಯಾದಿ.
- **ಐತಿಹಾಸಿಕ ಸ್ಮಾರಕಗಳು**; ಕಲಾ ಶಾಲೆಗಳು, ಹಳೆಯ ಸ್ಮಾರಕಗಳು, ದೇವಸ್ಥಾನಗಳು,ಮಸೀದಿ, ಉದ್ಯಾನವನ,ಇತ್ಯಾದಿ.

- **<u>ಸಾರಿಗೆ ನಿಲ್ದಾಣಗಳು</u>**; ರೈಲ್ವೆ, ಬಸ್, ವಿಮಾನ ನಿಲ್ದಾಣಗಳು,ಇತ್ಯಾದಿ.
- **<u>ವಾಣಿಜ್ಯ ಕೇಂದ್ರಗಳು</u>**; ಬ್ಯಾಂಕು,ಕಾರ್ಖಾನೆ, ಆಸ್ಪತ್ರೆ, ನ್ಯಾಯಾಲಯ, ವಿದ್ಯಾಕೇಂದ್ರ, ಮಾರುಕಟ್ಟೆ, ಇತ್ಯಾದಿ.
- **<u>ಮಾನವ ವರ್ಗಮೂಲ;</u>** ರಾಷ್ಟ್ರನಾಯಕರು, ವ್ಯಾಪಾರಿಗಳು, ಕೈಗಾರಿಕಾ ಕ್ಷೇತ್ರದ ಜನರು, ಉದ್ಯೋಗ ಶೀಲರು, ಇತ್ಯಾದಿ.
- **<u>ಸಮೂಹ ಮಾದ್ಯಮಗಳು</u>**; ರೇಡಿಯೋ, ದೂರದರ್ಶನ, ಚಲನಚಿತ್ರಗಳು,ಇತ್ಯಾದಿ.
- ಚರ್ಚೆ & ಉಪನ್ಯಾಸ – ಇತ್ಯಾದಿ;

# ಪ್ರಚಲಿತ ಘಟನೆಗಳ ಪ್ರಾಮುಖ್ಯತೆ

- ಬದಲಾಗುತ್ತಿರುವ ಸಾಮಾಜದೊಂದಿಗೆ ವಿದ್ಯಾರ್ಥಿಗಳು ಹೊಂದಿಕೊಳ್ಳಲು ಸಹಾಯಕ ತಿಳುವಳಿಕೆ ಬೆಳೆಸುತ್ತದೆ.
- ಆಧುನಿಕ ಘಟನೆಗಳ ಮೌಲ್ಯಮಾಪನದ ಅರಿವನ್ನುಂಟು ಮಾಡಲು ಸಹಾಯಕವಾಗಿದೆ.
- ಪ್ರಚಲಿತ ಘಟನೆಗಳೇ ಮುಂದಿನ ಚರಿತ್ರೆ, ಇತಿಹಾಸಕಾರರಿಗೆ ಆಕರ ಸಾಮಗ್ರಿಗಳಾಗಿವೆ.

- ಪ್ರಜಾಪ್ರಭುತ್ವದಲ್ಲಿ ನಂಬಿಕೆಯುಳ್ಳ ಪ್ರಾಮಾಣಿಕ ಪೌರನನ್ನು ರೂಪಿಸುತ್ತದೆ.
- ಬೋಧನೆಯಲ್ಲಿ ವಿದ್ಯಾರ್ಥಿಗಳು ಚರ್ಚಿಸಲು,ವಿಶ್ವ ವ್ಯವಹಾರಗಳ ಮೌಲ್ಯಮಾಪನ ಮಾಡಲು & ಪ್ರಸ್ತುತ ಜಗತ್ತಿಗೆ ಹೊಂದಿಕೊಳ್ಳಲು ಸಹಾಯಕವಾಗಿವೆ.
- ರಾಷ್ಟ್ರೀಯ, ಅಂತರಾಷ್ಟ್ರೀಯ ಸಮಸ್ಯೆಗಳನ್ನು ಅರಿಯಲು ಸಹಾಯಕ.
- ಭವಿಷ್ಯದ ಸಮಾಜದಲ್ಲಿ ಉಂಟಾಗಬಹುದಾದ ಅನೇಕ ಬದಲಾವಣೆಗಳೊಂದಿಗೆ ಸರಿ ಹೊಂದಿಸಿಕೊಂಡು ಕಾಲಕ್ಕೆ ತಕ್ಕಂತೆ ನಡೆಯುವ ವಿಶೇಷ ಗುಣವನ್ನು ಕಲಿಯಲು ಇದು ಸಹಾಯಕ.
- ಪ್ರಗತಿಪರ ಪೌರತ್ವ ಗುರಿ ಸಾಧಿಸಲು ಪ್ರಚಲಿತ ಘಟನೆಗಳ ಅಧ್ಯಯನ ಅತ್ಯಾಗತ್ಯವಾಗಿದೆ.

# THANKS



Presented by : Devaraja Y, Lecturer, Kumadvathi College of Education, Shikaripura